MAY 30, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಜಾಗತಿಕ ಸೆಮಿಕಂಡಕ್ಟರ್** ತಾಣವಾಗಿ, ಕರ್ನಾಟಕ; ಮೂರು ಯೋಜನೆಗಳಿಗೆ, ಅನುಮೋದನೆ.
- **'ಸಾಥಿ ಯೋಜನೆ'**; ನಿರ್ಗತಿಕ ಮಕ್ಕಳ ಯೋಗಕ್ಷೇಮಕ್ಕಾಗಿ, ಜೂನ್ 27ರಿಂದ ಆಗಸ್ಟ್ 5ರ ವರೆಗೆ, ಸಮೀಕ್ಷೆ.
- **'ಕೃಷಿ ವಿಜ್ಞಾನಿಗಳ ನಡೆ, ರೈತರ ಕಡೆ'**; 'ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ'ಕ್ಕೆ, ಚಾಲನೆ.
- **ಕರಾವಳಿ ಜಿಲ್ಲೆಗಳಲ್ಲಿ ಧಾರಾಕಾರ** ಮಳೆ; ಮುಂಜಾಗ್ರತೆ ವಹಿಸಲು, ಹವಾಮಾನ ಇಲಾಖೆ, ಸೂಚನೆ.

<><><>

**ಈಗ ವಾರ್ತೆಗಳ ವಿವರ**

<><><>

**ಕರ್ನಾಟಕ, ಜಾಗತಿಕ ಸೆಮಿಕಂಡಕ್ಟರ್** ತಾಣವಾಗಲಿದೆ; ಮುಖ್ಯಮಂತ್ರಿ ಅವರ ಅಧ್ಯಕ್ಷತೆಯ, ಸಚಿವ ಸಂಪುಟ ಉಪ ಸಮಿತಿ, ಮೂರು ಪ್ರವರ್ತಕ ಸೆಮಿಕಂಡಕ್ಟರ್ ಯೋಜನೆಗಳಿಗೆ ಅನುಮೋದನೆ ನೀಡಿದೆ ಎಂದು, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ, ಈ ವಿಷಯ ತಿಳಿಸಿರುವ ಸಚಿವರು, ಅಪ್ಲೈಡ್ ಮೆಟೀರಿಯಲ್ಸ್ ಇಂಡಿಯಾ, ಬೆಂಗಳೂರಿನಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿ, ಫ್ಯಾಬ್ – ಇನ್ನೋವೇಶನ್ ಸೆಂಟರ್ ಫಾರ್ ಸೆಮಿಕಂಡಕ್ಟರ್ ಮ್ಯಾನುಫ್ಯಾಕ್ಚರಿಂಗ್ ಘಟಕವನ್ನು ಸ್ಥಾಪಿಸಲಿದೆ..

**ಚಿಪ್ ಮತ್ತು ಡಿಸ್‌ಪ್ಲೇ ನಾವಿನ್ಯತೆ ಕ್ಷೇತ್ರದಲ್ಲಿ,** 4 ಸಾವಿರದ 851 ಕೋಟಿ ರೂಪಾಯಿ ಹೂಡಿಕೆಯೊಂದಿಗೆ, ಸಾವಿರದ ಐನೂರು ಉದ್ಯೋಗಗಳನ್ನು ಸೃಷ್ಟಿಸಲಿದೆ.

<><><>

**ಲ್ಯಾಮ್ ರಿಸರ್ಚ್ 6 ಸಾವಿರದ 790 ಕೋಟಿ ರೂಪಾಯಿ** ಹೂಡಿಕೆಯೊಂದಿಗೆ ಸುಧಾರಿತ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯ ಹಾಗೂ 9 ಸಾವಿರದ 111 ಕೋಟಿ ಹೂಡಿಕೆಯೊಂದಿಗೆ, ಸೆಮಿಕಂಡಕ್ಟರ್ ಸಿಲಿಕಾನ್ ಘಟಕ ಉತ್ಪಾದನಾ ಸೌಲಭ್ಯ, ಸಾವಿರದ ನಾಲ್ಕುನೂರು ಉದ್ಯೋಗಗಳನ್ನು ಸೃಷ್ಟಿಸಲಿದೆ ಎಂದರು.

<><><>

**ಭಾರತ್ ಸೆಮಿ ಸಿಸ್ಟಮ್ಸ್** 2 ಸಾವಿರದ 342 ಕೋಟಿ ಹೂಡಿಕೆಯೊಂದಿಗೆ ಮೈಸೂರಿನಲ್ಲಿ ವಿನ್ಯಾಸ ಹಾಗೂ ಫ್ಯಾಬ್ರಿಕೇ ʼನ್ ಸೌಲಭ್ಯವನ್ನು ಒಳಗೊಂಡ ಸಮಗ್ರ ವಿನ್ಯಾಸ ಉತ್ಪಾದನಾ ಸೆಮಿಕಂಡಕ್ಟರ್ ಘಟಕವನ್ನು ಸ್ಥಾಪಿಸಲಿದ್ದು, 620ಕ್ಕೂ ಅಧಿಕ ಉದ್ಯೋಗಗಳನ್ನು ಯುವಜನತೆಗೆ ನೀಡಲಿದೆ ಎಂದು, ಪ್ರಕಟಿಸಿದ್ದಾರೆ.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ,** ಬೆಂಗಳೂರಿನಲ್ಲಿ ನಡೆದ, ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ ಸಭೆಯಲ್ಲಿ, ಕಲಬುರಗಿ ಜಿಲ್ಲೆಗೆ ಎರಡು ಪ್ರಮುಖ ಸಿಮೆಂಟ್ ಕೈಗಾರಿಕೆ ಯೋಜನೆಗಳಿಗೆ ಒಪ್ಪಿಗೆ ದೊರೆತಿದೆ. ಭಾರತದ ಸಿಮೆಂಟ್ ಉದ್ಯಮದಲ್ಲಿ, ಪ್ರಮುಖ ತಾಣವಾಗಿ ಕಲಬುರಗಿ ಜಿಲ್ಲೆಯ ಸ್ಥಾನವನ್ನು ಬಲಪಡಿಸಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ.

ಕಲಬುರಗಿಯಲ್ಲಿ, ವಿಪುಲ ಸುಣ್ಣದ ಕಲ್ಲಿನ ನಿಕ್ಷೇಪಗಳು ಮತ್ತು ಅಸ್ತಿತ್ವದಲ್ಲಿರುವ ಕೈಗಾರಿಕಾ ಮೂಲ ಸೌಕರ್ಯ, ಹೂಡಿಕೆಗಳಿಗೆ ಅನುಕೂಲ ಸ್ಥಳವಾಗಿಸಿದೆ..

<><><>

**ಸೇಡಂ ತಾಲೂಕಿನ ಬೆಂಕನಹಳ್ಳಿ ಗ್ರಾಮದಲ್ಲಿ,** ಸಿಮೆಂಟ್ ಲಿಮಿಟೆಡ್, ಒಟ್ಟು 2 ಸಾವಿರದ 406 ಕೋಟಿ ಹೂಡಿಕೆಯೊಂದಿಗೆ, 410 ಎಕರೆ ವಿಸ್ತೀರ್ಣದ ವಿಸ್ತರಣಾ ಯೋಜನೆ, 300 ಕ್ಕೂ ಅಧಿಕ ಉದ್ಯೋಗಗಳನ್ನು ಸೃಷ್ಟಿಸಲಿದೆ.

<><><>

**ಚಿತ್ತಾಪುರ ತಾಲೂಕಿನ ಬೊಮ್ಮನಹಳ್ಳಿಯಲ್ಲಿ,** ದಾಲ್ಮಿಯಾ ಸಿಮೆಂಟ್ ಲಿಮಿಟೆಡ್, 2 ಸಾವಿರದ 17 ಎಕರೆ ವಿಸ್ತೀರ್ಣದಲ್ಲಿ, ಸಿಮೆಂಟ್ ಉತ್ಪಾದನಾ ಘಟಕ ಸ್ಥಾಪಿಸಲಿದ್ದು, 3 ಸಾವಿರದ 20 ಕೋಟಿ ರೂಪಾಯಿ ಹೂಡಿಕೆಯೊಂದಿಗೆ, 570 ಜನರಿಗೆ ಉದ್ಯೋಗಾವಕಾಶ ಲಭಿಸಲಿದೆ ಎಂದು, ಸಚಿವ ಖರ್ಗೆ

<><><>

**ಬಹು ನಿರೀಕ್ಷಿತ 'ಕರ್ನಾಟಕ ವೇದಿಕೆ** ಆಧಾರಿತ ಗಿಗ್ ಕಾರ್ಮಿಕರ, ಸಾಮಾಜಿಕ ಭದ್ರತೆ ಹಾಗೂ ಕ್ಷೇಮಾಭಿವೃದ್ಧಿ ಸುಗ್ರೀವಾಜ್ಞೆಗೆ, ರಾಜ್ಯಪಾಲರ ಅಂಕಿತ ದೊರೆತ ಹಿನ್ನೆಲೆ, ರಾಜಭವನಕ್ಕೆ ಗಿಗ್ ಕಾರ್ಮಿಕರೊಂದಿಗೆ ತೆರಳಿ, ಥಾವರಚಂದ ಗೆಹ್ಲೋಟ್ ಅವರನ್ನು ಭೇಟಿ ಮಾಡಿ, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ್, ಅಭಿನಂದನೆ ಸಲ್ಲಿಸಿದರು. ಬಳಿಕ ಮಾತನಾಡಿದ ಸಚಿವರು,

<><><>

**ಸಂತೋಷ ಲಾಡ (ಗಿಗ್) ಧ್ವನಿ 30 ಸೆಕೆಂದುಗಳು**

<><><>

**ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ,** ನಿರ್ಗತಿಕ ಮಕ್ಕಳ ಯೋಗಕ್ಷೇಮಕ್ಕಾಗಿ 'ಸಾಥಿ ಯೋಜನೆ' ಜಾರಿಗೊಳಿಸಿದೆ ಎಂದು, ವಿಜಯಪುರ ಜಿಲ್ಲಾ ನ್ಯಾಯಾಧೀಶ, ಅರವಿಂದ ಹಾಗರಗಿ ತಿಳಿಸಿದ್ದಾರೆ. ಬರುವ ಜೂನ್ 27 ರಿಂದ ಆಗಸ್ಟ್ 5ರ ವರೆಗೆ, ನಿರ್ಗತಿಕ ಮಕ್ಕಳ ಆಧಾರ್ ನೋಂದಣಿ ಹಾಗೂ ಅಂತಹ ಮಕ್ಕಳ ಪುನರ್ವಸತಿ ಖಾತ್ರಿಪಡಿಸಲು, ಕಾನೂನು ನೆರವನ್ನು, ಸಾಥಿ ಯೋಜನೆ ಮೂಲಕ ನೀಡಲಾಗುವುದು. ಸಮೀಕ್ಷೆ ಸಹ ಕೈಗೊಳ್ಳಲಾಗುವುದು ಎಂದರು.

<><><>

**ಚಿಕ್ಕಮಗಳೂರು** ಜಿಲ್ಲೆಯ ಎನ್.ಆರ್.ಪುರ ತಾಲೂಕಿನ, ಹರಾವರಿ ಗ್ರಾಮದಲ್ಲಿ, 2 ದಿನಗಳ ಮಗುವನ್ನು, 1 ಲಕ್ಷ ರೂಪಾಯಿಗೆ ಮಾರಾಟ ಮಾಡಿದ, ದಂಪತಿಯನ್ನು ಪೊಲೀಸರು ಬಂಧಿಸಿದ್ದಾರೆ.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ,** ಮೂವರು ಬಾಲ ಹಾಗೂ 37 ಕಿಶೋರ ಕಾರ್ಮಿಕರು ಸೇರಿ, ಒಟ್ಟು 40 ಮಕ್ಕಳ ರಕ್ಷಣೆ ಮಾಡಲಾಗಿದೆ ಎಂದು, ಜಿಲ್ಲಾಧಿಕಾರಿ ಎ.ಬಿ.ಬಸವರಾಜು ತಿಳಿಸಿದ್ದಾರೆ.

<><><>

**ಮಕ್ಕಳಲ್ಲಿ ಕೊರೋನಾ ಹರಡುವಿಕೆ** ತಡೆಗಟ್ಟಲು, ಸಂಬಂಧಪಟ್ಟ ಇಲಾಖೆಗಳು ಕೂಡಲೇ ಕ್ರಮವಹಿಸಬೇಕು ಎಂದು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣಗೌಡ, ಬೆಂಗಳೂರಿನಲ್ಲಿ ಸೂಚಿಸಿದ್ದಾರೆ.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**ಕೇಂದ್ರ ಕೃಷಿ ಮಂತ್ರಾಲಯ, ಧಾರವಾಡ ಸೇರಿದಂತೆ,** ದೇಶದ 731 ಗಾಂಧಿ ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ, 700 ಜಿಲ್ಲೆಗಳಲ್ಲಿ, ಜೂನ್ 12ರ ವರೆಗೆ, 15 ದಿನಗಳ ಕಾಲ, 'ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ' ಆಯೋಜಿಸಿದೆ. 'ಕೃಷಿ ವಿಜ್ಞಾನಿಗಳ ನಡೆ, ರೈತರ ಕಡೆ' ಧ್ಯೇಯದೊಂದಿಗೆ, ಈ ಅಭಿಯಾನಕ್ಕೆ ಚಾಲನೆ ದೊರೆಯಿತು. 'ವಿಕಸಿತ ಕೃಷಿ ಸಂಕಲ್ಪ ಅಭಿಯಾನ' ಎಂದರೆ, ವಿಜ್ಞಾನಿಗಳು ಪ್ರಯೋಗಾಲಯ ಬಿಟ್ಟು, ರೈತರ ನಡುವೆ ಹೊಲಗಳಿಗೆ ಹೋಗಬೇಕು. ಹಳ್ಳಿಯಲ್ಲಿ ರೈತರೊಂದಿಗೆ ಕುಳಿತು ಚರ್ಚಿಸಬೇಕು. ಅವರ ಸಮಸ್ಯೆಗಳನ್ನು ಅರಿಯಬೇಕು ಎಂದು, ಕೇಂದ್ರ ಕೃಷಿ ಖಾತೆ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಒಡಿಶಾದ ಪುರಿಯಲ್ಲಿ ಅಭಿಯಾನಕ್ಕೆ ಚಾಲನೆ ನೀಡಿ, ತಿಳಿಸಿದರು.

<><><>

**ಕಣ್ಮರೆಯಾಗಲಿರುವ ಹಾಗೂ ನಶಿಸಿ ಹೋಗುತ್ತಿರುವ,** ಸ್ಥಳೀಯ ಬೀಜಗಳನ್ನು ಸಂಗ್ರಹಿಸಿ, ಸಂರಕ್ಷಿಸುವ ಉದ್ದೇಶದಿಂದ, ದೇಸಿ ತಳಿಗಳನ್ನು ಬೆಳೆದು ಸಂರಕ್ಷಿಸುತ್ತಿರುವ ರೈತರು, ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಿ, ಮಾಹಿತಿ ಒದಗಿಸಿ, ಹೆಸರು ನೊಂದಾಯಿಸಲು, ನಾಳೆ ಸಂಜೆ ವರೆಗೆ ಅವಕಾಶವಿದೆ.

<><><>

**ಪ್ರದೇಶ ಸಮಾಚಾರಕ್ಕಾಗಿ** ತಮ್ಮ ಅನುಭವ ಹಂಚಿಕೊಂಡಿದ್ದಾರೆ, ಹಾವೇರಿ ಜಿಲ್ಲೆ, ಶಿಗ್ಗಾವ ತಾಲೂಕು, ಚಿಕ್ಕ ಬೆಂಡಿಗೇರಿ ಗ್ರಾಮದ, ಹೊಂಬಾಳೆ ಸಮುದಾಯ ಬೀಜ ಬ್ಯಾಂಕ್ ಪ್ರವರ್ತಕಿ, ಕೃಷಿಕ ಮಹಿಳೆ ಚೈತ್ರಾ ಪ್ರಕಾಶಗೌಡ ಚೆನ್ನವೀರಗೌಡ್ರು.

<><><>

**ಚೈತ್ರಾ ಪ್ರಕಾಶಗೌಡ ಚೆನ್ನವೀರಗೌಡ್ರು ಧ್ವನಿ 60 ಸೆಕೆಂದುಗಳು**

<><><>

**ಕರಾವಳಿ ಜಿಲ್ಲೆಗಳಲ್ಲಿ ಧಾರಾಕಾರ** ಮಳೆ ಮುಂದುವರಿದಿದೆ. ದಕ್ಷಿಣಕನ್ನಡ ಜಿಲ್ಲೆಗೆ, ಇಂದೂ ಸಹ ರೆಡ್ ಅಲರ್ಟ್ ಪ್ರಕಟಿಸಲಾಗಿದೆ. ಜಿಲ್ಲೆಯಾದ್ಯಂತ, ಒಟ್ಟು 252 ಮನೆಗಳಿಗೆ ಹಾನಿಯಾಗಿದೆ. 12 ಮನೆಗಳು ಸಂಪೂರ್ಣ ಹಾನಿಗೀಡಾಗಿವೆ. ತೋಟಗಾರಿಕಾ ಬೆಳೆ ಹಲವೆಡೆ ನಾಶವಾಗಿದೆ. 3 ಸಾವಿರದ 166 ವಿದ್ಯುತ್ ಕಂಬಗಳು ಧರೆಗುರುಳಿವೆ. 63 ವಿದ್ಯುತ್ ಸರಬರಾಜು ಪರಿವರ್ತಕಗಳು ಹಾನಿಗೊಳಗಾಗಿವೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

<><><>

**ಕೊಡಗು ಜಿಲ್ಲೆಗೆ, ಇಂದೂ ಸಹ** ರೆಡ್ ಅಲರ್ಟ್ ಘೋಷಿಸಲಾಗಿದೆ. ಶಾಲೆಗಳಿಗೆ ಶನಿವಾರದ ವರೆಗೆ ರಜೆ ಘೋಷಿಸಲಾಗಿದೆ. ಹಲವು ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಪುನರ್ ಸ್ಥಾಪಿಸಲು, ರಾಜ್ಯದ ವಿವಿಧ ಜಿಲ್ಲೆಗಳಿಂದ, 74 ಜನ ಲೈನ್‌ಮನ್‌ಗಳನ್ನು ಕೊಡಗು ಜಿಲ್ಲೆಗೆ  ನಿಯೋಜಿಸಲಾಗಿದೆ. ಕಾವೇರಿ ನದಿಯಲ್ಲಿ ನೀರಿನ ಹರಿವು ತೀವ್ರ ಹೆಚ್ಚಳವಾಗಿರುವ ಹಿನ್ನೆಲೆ, ದುಬಾರೆ ಸಾಕಾನೆ ಶಿಬಿರಕ್ಕೆ, ಪ್ರವಾಸಿಗರ ಭೇಟಿಯನ್ನು ನಿರ್ಬಂಧಿಸಲಾಗಿದೆ. 2 ಸಾವಿರದ 859 ಅಡಿ ಗರಿಷ್ಟ ಸಂಗ್ರಹಣಾ ಸಾಮರ್ಥ್ಯದ ಹಾರಂಗಿ ಜಲಾಶಯದಲ್ಲಿ, ಪ್ರಸ್ತುತ 2843 ಅಡಿ ನೀರು ಸಂಗ್ರಹವಾಗಿದೆ.

<><><>

**ಲೋಕೋಪಯೋಗಿ ಖಾತೆ ಸಚಿವ, ಸತೀಶ್ ಜಾರಕಿಹೊಳಿ ಅವರು,** ಹಾಸನ ಜಿಲ್ಲೆ,  ಸಕಲೇಶಪುರ ತಾಲೂಕಿನ ಆನೆ ಮಹಲ್ ಹಾಗೂ ದೊಡ್ಡ ತಪ್ಪಲು ಬಳಿ, ಮಳೆಯಿಂದ ಮಣ್ಣು ಕುಸಿತವಾದ ಸ್ಥಳಗಳನ್ನು, ವೀಕ್ಷಿಸಿದರು.

<><><>

**2022ರಲ್ಲಿ ಹಳೇ ಹುಬ್ಬಳ್ಳಿಯಲ್ಲಿ ನಡೆದಿದ್ದ,** ಗಲಭೆ ಪ್ರಕರಣಕ್ಕೆ ಸಂಬಂಧಿಸಿ, 43 ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದಿದ್ದ, ರಾಜ್ಯ ಸರ್ಕಾರದ ನಿರ್ದೇಶನವನ್ನು, ರಾಜ್ಯ ಹೈಕೋರ್ಟ್ ರದ್ದು ಪಡಿಸಿದೆ. ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಿ, ಗಿರೀಶ ಭಾರದ್ವಾಜ್ ಸಲ್ಲಿಸಿದ್ದ, ಸಾರ್ವಜನಿಕ ಹಿತಾಸಕ್ತ ಅರ್ಜಿ ವಿಚಾರಣೆ ನಡೆಸಿದ, ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೆ.ವಿ. ಅರವಿಂದ ಅವರಿದ್ದ, ಬೆಂಗಳೂರು ಹೈಕೋರ್ಟ್ ದ್ವಿಸದಸ್ಯ ಪೀಠ, ರಾಜ್ಯ ಸರ್ಕಾರದ ನಿರ್ಣಯವನ್ನು ರದ್ದುಪಡಿಸಿತು.

<><><>

**ಕೇಂದ್ರ ಸಚಿವ ಪ್ರಲ್ಹಾದ ಜೋಶಿ,** ಈ ತೀರ್ಪಿನ ಹಿನ್ನೆಲೆ ಎಕ್ಸ್ ಮಾಧ್ಯಮದಲ್ಲಿ ಪ್ರತಿಕ್ರಿಯಿಸಿ, ಕಾನೂನು ಸುವ್ಯವಸ್ಥೆಯ ಮಹತ್ವವನ್ನು, ಗೌರವಾನ್ವಿತ ಉಚ್ಚ ನ್ಯಾಯಾಲಯ ಎತ್ತಿ ಹಿಡಿದಿದೆ; ಕಾನೂನಿನ ಮೇಲೆ ನಂಬಿಕೆ ಮತ್ತು ವಿಶ್ವಾಸವನ್ನು ಹೆಚ್ಚಿಸಿದೆ ಎಂದಿದ್ದಾರೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಬಾಗಲಕೋಟೆ ಜಿಲ್ಲೆಯ ಉತ್ತೂರು,** ಶಿರೋಳ, ಹನಗಂಡಿ ಸೇರಿ, ವಿವಿಧ ಸರ್ಕಾರಿ ಶಾಲೆಗಳಲ್ಲಿ, ಒಂದನೇ ತರಗತಿಗೆ ಸೇರುವ ಮಕ್ಕಳಿಗೆ, 1 ಸಾವಿರದಿಂದ 2 ಸಾವಿರದ ವರೆಗೆ 'ಠೇವಣಿ' ಇಡುವ ಯೋಜನೆ, ಜಾರಿಗೊಳಿಸಲಾಗಿದೆ.

<><><>

**70 ವ ೯ದ ವೃದ್ಧರೋರ್ವರು,** ಕೋವಿಡ್ ಸೋಂಕಿನಿಂದ, ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾಗಿ, ಬೆಳಗಾವಿ ಜಿಲ್ಲಾ ಆಸ್ಪತ್ರೆಯ, ಶಸ್ತ್ರಚಿಕಿತ್ಸಕ ಡಾಕ್ಟರ್ ವಿಠ್ಠಲ ಶಿಂಧೆ ತಿಳಿಸಿದ್ದಾರೆ.

<><><>

**ವಿಜಯನಗರ ಜಿಲ್ಲೆ,** ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಜಾಗತಿಕ ಸೆಮಿಕಂಡಕ್ಟರ್** ತಾಣವಾಗಿ, ಕರ್ನಾಟಕ; ಮೂರು ಯೋಜನೆಗಳಿಗೆ, ಅನುಮೋದನೆ.
- **'ಸಾಥಿ ಯೋಜನೆ'**; ನಿರ್ಗತಿಕ ಮಕ್ಕಳ ಯೋಗಕ್ಷೇಮಕ್ಕಾಗಿ, ಜೂನ್ 27ರಿಂದ ಆಗಸ್ಟ್ 5ರ ವರೆಗೆ, ಸಮೀಕ್ಷೆ.
- **'ಕೃಷಿ ವಿಜ್ಞಾನಿಗಳ ನಡೆ, ರೈತರ ಕಡೆ'**; 'ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ'ಕ್ಕೆ, ಚಾಲನೆ.
- **ಕರಾವಳಿ ಜಿಲ್ಲೆಗಳಲ್ಲಿ ಧಾರಾಕಾರ** ಮಳೆ; ಮುಂಜಾಗ್ರತೆ ವಹಿಸಲು, ಹವಾಮಾನ ಇಲಾಖೆ, ಸೂಚನೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>